**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಹಾಸನ.**

**ಎಸ್ ಸಿ ನಂ.41/2017**

ಪಿಡಬ್ಲ್ಯೂ: 8
ಸಿಡಬ್ಲ್ಯೂ:18

| | | |
|---|---|---|
| ಸಾಕ್ಷಿದಾರರ ಹೆಸರು | : | ಚೆನ್ನೇಗೌಡ ಹೆಚ್ ಆರ್ |
| ತಂದೆಯ ಹೆಸರು | : | ಲೇಟ್ ಹೆಚ್ ಸಿ ರೇವೇಗೌಡ |
| ವಯಸ್ಸು | : | 59 ವರ್ಷ |
| ವೃತ್ತಿ | : | ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ |
| ವಾಸ | : | ಹಾಸನ |

**ದಿನಾಂಕ: 21.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

ನಾನು 2015 ರಿಂದ 2023 ರವರೆಗೆ ಹಾಸನ ಲೋಕೋಪಯೋಗಿ ವಿಶೇಷ ಉಪ ವಿಭಾಗದಲ್ಲಿ ಸಹಾಯಕ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ: 06.12.2016 ರಂದು ಹಾಸನ ಗ್ರಾಮಾಂತರ ವೃತ್ತ ನಿರೀಕ್ಷಕರಿಂದ ಹಾಸನ ಗ್ರಾಮಾಂತರ ಪೊಲೀಸ್ ಠಾಣೆ ಮೊ:ನಂ. 265/2016ಕ್ಕೆ ಸಂಬಂಧಿಸಿದಂತೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸ್ಥಳದ ನಕಾಶೆಯನ್ನು ತಯಾರಿಸಿ ಕೊಡುವಂತೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರಿಗೆ ಮನವಿ ಪತ್ರ ನೀಡಿದ್ದರು. ಅದೇ ದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಸದರಿ ಪತ್ರವನ್ನು ನನಗೆ ನೀಡಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸ್ಥಳದ ನಕಾಶೆಯನ್ನು ತಯಾರಿಸುವಂತೆ ಸೂಚನೆ ನೀಡಿದ್ದರು.

(ಪ್ರಕರಣದ ತನಿಖಾಧಿಕಾರಿಯವರು ಲೋಕೋಪಯೋಗಿ ಇಲಾಖೆಗೆ ಸಲ್ಲಿಸಿರುತ್ತಾರೆ ಎನ್ನಲಾದ ದಿನಾಂಕಃ 06.12.2016ರ ಪತ್ರವನ್ನು ಪ್ರಕರಣದ ತನಿಖಾಧಿಕಾರಿ ನ್ಯಾಯಾಲಯಕ್ಕೆ ಹಾಜರುಪಡಿಸದ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಲಾಗಿಲ್ಲ.) ದಿನಾಂಕಃ 21.12.2016 ರಂದು ನಾನು ಪೊಲೀಸ್ ಕಾನ್ಸ್ ಟೇಬಲ್ ಡಿ.ಹರೀಶ್ ರವರು ನನ್ನನ್ನು ಕೃತ್ಯ ನಡೆದ ಸ್ಥಳವಾದ ಇಬ್ಬಾಣೆ ಗ್ರಾಮದ ಜನತಾ ಕಾಲೋನಿಗೆ ಕರೆದುಕೊಂಡು ಹೋಗಿ ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ನಾನು ಕೃತ್ಯ ನಡೆದ ಸ್ಥಳವನ್ನು ಪರಿಶೀಲನೆ ಮಾಡಿ ಕೃತ್ಯ ಸ್ಥಳದ ನಕಾಶೆಯನ್ನು ತಯಾರಿಸಿ ಅದನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಮುಖಾಂತರ ಪ್ರಕರಣದ ತನಿಖಾಧಿಕಾರಿಗೆ ಸಲ್ಲಿಸಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ನಿಪಿ-7 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ನಿಪಿ-7 ನಕಾಶೆಯಲ್ಲಿ ಕಂಡು ಬರುವ ಮನೆ ಹಾಗೂ ನಿವೇಶನದ ಉತ್ತರಕ್ಕೆ ಮಣ್ಣಿನ ರಸ್ತೆ ಹಾಗೂ ದಕ್ಷಿಣಕ್ಕೆ ಮಲ್ಲಿಕಾರ್ಜುನರವರ ಹೆಂಚಿನ ಮನೆ ಇರುತ್ತದೆ. ಪೂರ್ವಕ್ಕೆ ಬಸವರಾಜುರವರ ಖಾಲಿ ನಿವೇಶನ, ಪಶ್ಚಿಮಕ್ಕೆ ವಿರೂಪಾಕ್ಷಯ್ಯರವರ ವಾಸದ ಮನೆ ಬರುತ್ತದೆ. ನಿಪಿ-7 ನಕಾಶೆಯಲ್ಲಿ ಕಾಣಿಸಿರುವ ಖಾಲಿ ನಿವೇಶನ ಹಾಗೂ ಮನೆಯ ದಕ್ಷಿಣಕ್ಕೆ ಮಲ್ಲಿಕಾರ್ಜುನರವರ ಮನೆ ನಂತರ ಮಣ್ಣಿನ ರಸ್ತೆ ಬರುತ್ತದೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಸಿ ಎನ್ ವಿ ವಕೀಲರಿಂದ**

3. ನಿಪಿ-7 ನಕಾಶೆಯಲ್ಲಿ ಕಾಣಿಸಿರುವ ನಿವೇಶನ ಹಾಗೂ ಮನೆಯ ಪೂರ್ವಕ್ಕೆ ವಿರೂಪಕ್ಷಯ್ಯನವರ ವಾಸದ ಮನೆ ಇರುವ ಬಗ್ಗೆ ಕಾಣಿಸಿರುತ್ತೇನೆಂದರೆ ಸರಿ. ನನಗೆ ವನಜಾಕ್ಷಿ ರವರ ಮನೆಗೆ ಸಂಬಂಧಿಸಿದಂತೆ ನಕಾಶೆ ತಯಾರಿಸುವಂತೆ ಕೋರಲಾಗಿತ್ತು. ನಿಪಿ-7 ನಕಾಶೆಯಲ್ಲಿ ಕಾಣಿಸಿರುವಂತೆ ಮಲ್ಲಿಕಾರ್ಜುನರವರ ಮನೆಯ ದಕ್ಷಿಣಕ್ಕೆ ಮಣ್ಣಿನ ರಸ್ತೆ ಬರುವ ಬಗ್ಗೆ ಕಾಣಿಸಲಾಗಿದೆ ಎಂದರೆ ಸರಿ. ನಿಪಿ-7 ರಲ್ಲಿ ನಾನು ಮಲ್ಲಿಕಾರ್ಜುನರವರ ಹೆಂಚಿನ ಮನೆ ಮತ್ತು ಇಟ್ಟಿಗೆ ಗೋಡೆಯ ವಿಸ್ತೀರ್ಣವನ್ನು ಕಾಣಿಸಿಲ್ಲ ಎಂದರೆ ಸರಿ. ಮಲ್ಲಿಕಾರ್ಜುನರವರ ಹೆಂಚಿನ ಮನೆಗೆ ಹೊಂದಿಕೊಂಡಂತೆ ಇದ್ದ ಇಟ್ಟಿಗೆಯ ಗೋಡೆ ಡ್ಯಾಮೇಜ್ ಆಗಿತ್ತು. ವನಜಾಕ್ಷಿ ರವರ ನಿವೇಶನಕ್ಕೆ ಹೋಗಲು ದಾರಿ ಉತ್ತರ ದಿಕ್ಕಿನಲ್ಲಿತ್ತು ಎಂದು ನಾನು ಕಾಣಿಸಿರುತ್ತೇನೆ. ಕೃತ್ಯ ಸ್ಥಳದ ನಕಾಶೆಯನ್ನು ತಯಾರಿಸುವ ಪೂರ್ವದಲ್ಲಿ ನಾವು ಒಂದು ರಫ್ ಸ್ಕೆಚ್ ಅನ್ನು

ತಯಾರಿಸಿಕೊಳ್ಳುತ್ತೇವೆಂದರೆ ಸರಿ. ನಾನು ರಫ್ ಸ್ಕೆಚ್ ಅನ್ನು ನಿಪಿ–7ರ ಜೊತೆ ತನಿಖಾಧಿಕಾರಿಗೆ ಕಳುಹಿಸಿಕೊಟ್ಟಿಲ್ಲ. ನನಗೆ ಕುಮಾರಸ್ವಾಮಿರವರ ಖಾಲಿ ನಿವೇಶನದ ನಕಾಶೆಯನ್ನು ತಯಾರಿಸುವಂತೆ ಕೇಳಲಾಗಿದ್ದು ವನಜಾಕ್ಷಿ ರವರ ಹಾಲಿ ನಿವೇಶನದ ನಕಾಶೆಯನ್ನು ತಯಾರಿಸುವಂತೆ ಕೇಳಿಲ್ಲ. ನಿಪಿ–7 ರಲ್ಲಿ ರಕ್ತದ ಕಲೆಗಳು ಎಲ್ಲಿ ಬಿದ್ದಿದ್ದವು ಎಂಬುದನ್ನು ನಾನು ಕಾಣಿಸಿಲ್ಲ. ಉತ್ತರ ದಿಕ್ಕಿನಲ್ಲಿರುವ ಗೇಟ್ ನ ಬಳಿ ರಕ್ತದ ಕಲೆಗಳು ಬಿದ್ದಿದ್ದವು ಎಂದರೆ ಇರಬಹುದು ನನಗೆ ತಿಳಿದಿಲ್ಲ. ನಾನು ಪ್ರಶ್ನಿತ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿಲ್ಲ ಹಾಗೂ ನಿಪಿ–7 ರಂತೆ ಯಾವುದೇ ನಕಾಶೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆಯಂತೆ ಪೊಲೀಸ್ ಠಾಣೆಯಲ್ಲೇ ಕುಳಿತು ನಿಪಿ–7ನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್

ನ್ಯಾಯಾಧೀಶರು, ಹಾಸನ.